ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸೆಷನ್ಸ್‌ಕೇಸ್ ನಂಬರ್ : 250/2022**

**ಪ್ರಾಸಾ- 3 ಚಾಸಾ- 4**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಶ್ವೇತಾ |
| ಗಂಡನ ಹೆಸರುಃ | : | ಅಶೋಕ್ |
| ವಯಸ್ಸುಃ | : | 40 ವರ್ಷ |
| ಉದ್ಯೋಗಃ | : | ವ್ಯಾಪಾರ |
| ವಾಸ | : | ಬೆಂಗಳೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:17-09-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ಚಾಸಾ-1 ನಮ್ಮ ಸಂಬಂಧಿಕರು. ಮೃತ ತೇಜಸ್ವಿನಿ ಅವರಮಗಳು. ಈಗ 3 ವರ್ಷದ ಹಿಂದೆ ಆಕೆ ತೀರಿಕೊಂಡಳು. ಆ ವಿಚಾರ ತಿಳಿದು ನಾನು ಸರ್ಕಾರಿ ಆಸ್ಪತ್ರೆಗೆ ಹೋದೆನು. ಅಲ್ಲಿ ಶವಾಗಾರದಲ್ಲಿ ಆಕೆಯ ಶವ ಇತ್ತು. ನಾನು ನೋಡಿದಾಗ ಕತ್ತಿನಲ್ಲಿಕಂದುಬಣ್ಣದ ತರಹ ಇತ್ತು. ಕುತ್ತಿಗೆ ಭಾಗದಲ್ಲಿ ಕೆಲವೊಂದು ಗಾಯಗಳು ಕಂಡುಬಂದವು. ಅಲ್ಲಿಗೆ ಪೊಲೀಸರು ಬಂದಿದ್ದರು, ಬರವಣಿಗೆ ಮಾಡಿಕೊಂಡು ನನ್ನ ಸಹಿ ಪಡೆದುಕೊಂಡರು. ನಿಪಿ-6ರಲ್ಲಿ ನನ್ನ ರುಜು ಇರುತ್ತದೆ. ಸದರಿ ರುಜುವನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ಮಾಹಿತಿ ಬಂದಾಗ ನಾನು ಬೆಂಗಳೂರಿನಲ್ಲಿ ಇದ್ದೆನು. ನನಗೆ ಮಾಹಿತಿ 2ನೇ ತಾರೀಖಿನಂದು ಮಧ್ಯಾಹ್ನದ ನಂತರ ಬಂತು. ಅಲ್ಲಿಂದ ಹೊರಟು ಸಾಯಂಕಾಲ 5 ಗಂಟೆಗೆ ಹಾಸನಕ್ಕೆ ಬಂದೆನು. ನಾನು ಸ್ಥಳಕ್ಕೆ ಬಂದಾಗ ಮಹಜರು ಮುಗಿದಿತ್ತು ಎಂದರೆ ಸರಿ. ಶವತನಿಖೆಯನ್ನು ಎಷ್ಟು ಗಂಟೆಗೆ

ಪ್ರಾರಂಭಿಸಿ ಎಷ್ಟು ಗಂಟೆಗೆ ಮುಗಿಸಿದರು ಎನ್ನುವುದು ನನಗೆ ಗೊತ್ತಿಲ್ಲ ಎಂದರೆ ಸರಿ. ಕುತ್ತಿಗೆಯಲ್ಲಿ ಇದ್ದ ಗಾಯ ಎಷು ್ಟ ಆಳ ಮತ್ತು ಎಷ್ಟು ಉದ್ದ ಇತ್ತೆಂದು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿ. ಆಕೆ ಧರಿಸಿದ್ದ ಬಟ್ಟೆಗೆ ರಕ್ತ ಆಗಿತ್ತೋ ಎಂದು ನಾನು ಗಮನಿಸಿಲ್ಲ. ಪೊಲೀಸರು ನಾನು ಹೆಣ ನೋಡಲು ಹೋಗಿದ್ದಕ್ಕೆ ಸಹಿ ಹಾಕಲು ಹೇಳಿದರು ಆದ್ದರಿಂದ ಸಹಿ ಹಾಕಿದ್ದೇನೆ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**